ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಸಿ.ಜೆ.ಎಂ.,
ನ್ಯಾಯಾಲಯ, ಚಿಕ್ಕಮಗಳೂರು.

<u>ಸಿ.ಸಿ.1245/2021</u>

| | | | |
|---|---|---|---|
| ಸಾಕ್ಷಿದಾರರ ಹೆಸರು | : | ಅಂಥೋನಿ ಲೂಯಿಸ್ | ಪಿ.ಡಬ್ಲ್ಯೂ.5 |
| ತಂದೆಯ ಹೆಸರು | : | ಎ.ಜಾರ್ಜ್ ಪಿರೇರಾ | ಸಿ.ಡಬ್ಲ್ಯೂ.15 |
| ವಯಸ್ಸು | : | 67 ವರ್ಷ | |
| ವೃತ್ತಿ | : | ಮೆಕ್ಯಾನಿಕ್ | |
| ವಾಸ | : | ಹಾಸನ | |

<u>ದಿನಾಂಕಃ 15-04-2026 ರಂದು ಪ್ರಮಾಣ ವಚನ ಭೋದಿಸಲಾಯಿತು.</u>

<u>ಮುಖ್ಯ ವಿಚಾರಣೆಃ ಅಭಿಯೋಜನೆ ಪರ ಮಾನ್ಯ ಎಪಿಪಿ ರವರಿಂದಃ-</u>

1ನೇ ಆರೋಪಿ ನನಗೆ ಗೊತ್ತು. 2 ರಿಂದ 5ನೇ ಆರೋಪಿತರ ಪರಿಚಯವಿಲ್ಲ. ನನಗೆ ಅಶೋಕ್ ಗೌಡ ಎನ್ನುವವರು ಗಾಡಿಯನ್ನು ಮಾರಾಟ ಮಾಡಿದ್ದರು. ನನ್ನ ಮನೆಯ ಪಕ್ಕ ಗಾಡಿಯನ್ನು ಪಾರ್ಕ್ ಮಾಡಲು ಜಾಗ ಇಲ್ಲದೇ ಇದ್ದ ಕಾರಣ ಆ ಗಾಡಿಯನ್ನು ಸಾದೀಕ್ ಎನ್ನುವವರಿಗೆ ಮಾರಾಟ ಮಾಡಿರುತ್ತೇನೆ. ಸದರಿ ಗಾಡಿ ಇಂಡಿಕಾ ಕಾರು ಇರುತ್ತದೆ. ಅದರ ನಂಬರ್ ಅನ್ನು ಹೇಳಲು ನನಗೆ ನೆನಪಿಲ್ಲ. ಸದರಿ ಗಾಡಿಯನ್ನು ಮಾರಾಟ ಮಾಡಿ ಸುಮಾರು 6 ರಿಂದ 7 ವರ್ಷ ಆಗಿರುತ್ತದೆ. ನನಗೆ ಅಶೋಕ್ ರವರು ಫೋನ್ ಮಾಡಿ ಗಾಡಿಯನ್ನು ಹಿಡಿದು ಠಾಣೆಯಲ್ಲಿ ಇಟ್ಟಿರುತ್ತಾರೆ ಎಂದು ತಿಳಿಸಿರುತ್ತಾರೆ. ನಂತರ ನಾನು ಠಾಣೆಗೆ ಬಂದು ನಾನು ಹೇಳಿಕೆಯನ್ನು ನೀಡಿರುತ್ತೇನೆ. ಸದರಿ

ಸಾದೀಕ್ ರವರು ಆ ಗಾಡಿಯಲ್ಲಿ ಏನು ಮಾಡಿರುತ್ತಾರೆ ಎನ್ನುವ ವಿಚಾರ ನನಗೆ ತಿಳಿದಿರುವುದಿಲ್ಲ. ನಾನು ಪೊಲೀಸರ ಮುಂದೆ ಈ ಬಗ್ಗೆ ಹೇಳಿಕೆಯನ್ನು ನೀಡಿರುವುದಿಲ್ಲ.

(ಈ ಹಂತದಲ್ಲಿ ಎಪಿಪಿರವರು ಸದರಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿಯನ್ನು ಕೋರಿರುತ್ತಾರೆ. ಅನುಮತಿಯನ್ನು ನೀಡಲಾಯಿತು)

<u>ಪಾಟೀ ಸವಾಲುಃ ಮಾನ್ಯ ಎಪಿಪಿ ರವರಿಂದಃ-</u>

ಸದರಿ ಇಂಡಿಕಾ ಕಾರಿನ ನಂಬರ್ ಕೆಎ-18/ಪಿ-5155 ಇರುತ್ತದೆ ಎಂದರೆ ಇರಬಹುದು. ಗಾಂಜಾಕ್ಕೆ ಸಂಬಂಧಪಟ್ಟಂತೆ ಸದರಿ ಕಾರನ್ನು ಆರೋಪಿತರು ಉಪಯೋಗಿಸಿದ್ದರು ಎಂದರೆ ನನಗೆ ಗೊತ್ತಿಲ್ಲ. ಸದರಿ ಗಾಡಿಯಲ್ಲಿ ಆರೋಪಿತರು ಗಾಂಜಾವನ್ನು ಇಟ್ಟುಕೊಂಡು ಮಾರಾಟ ಮಾಡುತ್ತಿದ್ದರು ಎಂದರೆ ನನಗೆ ಗೊತ್ತಿಲ್ಲ. ಸದರಿ ಗಾಡಿಯ ಫೋಟೋವನ್ನು ಸಾಕ್ಷಿದಾರರಿಗೆ ತೋರಿಸಲಾಗಿ ಸಾಕ್ಷಿದಾರರು ಅದನ್ನು ಒಪ್ಪಿಕೊಂಡಿರುತ್ತಾರೆ. ಅದನ್ನು ಈಗಾಗಲೇ ನಿಪಿ-8 ಮತ್ತು 9 ಎಂದು ಗುರುತಿಸಲಾಗಿರುತ್ತದೆ.

<u>ಪಾಟೀ ಸವಾಲುಃ 5 ನೇ ಆರೋಪಿತರ ಪರ ವಕೀಲರಿಂದಃ-</u>

ನಿಪಿ-8 ಮತ್ತು 9 ರಲ್ಲಿ ಗಾಡಿಯ ನಂಬರ್ ಕಾಣಿಸುತ್ತಿಲ್ಲ ಎಂದರೆ ಸರಿ. ಸದರಿ ಕಾರಿನ ಬಣ್ಣದ ಆಧಾರದ ಮೇಲೆ ಸದರಿ ಇಂಡಿಕಾ ಕಾರು ಎಂದು ಹೇಳುತ್ತಿದ್ದೇನೆ ಎಂದರೆ ಸರಿ. ಸದರಿ ನಿಪಿ-8 ಮತ್ತು 9 ರಲ್ಲಿ Golden Eagle ಎಂದು ಬರೆದಿರುತ್ತದೆ ಎಂದು ಸಾಕ್ಷಿದಾರರು ನುಡಿಯುತ್ತಾರೆ. ಸದರಿ Golden Eagle ಎಂದು ಬರೆದಿರುವುದು ನಿಪಿ-8 ಮತ್ತು 9 ರಲ್ಲಿ ಕಾಣಿಸುತ್ತಿಲ್ಲ ಎಂದರೆ ಸರಿ.

<u>ಪಾಟೀ ಸವಾಲುಃ 2, 3 ಮತ್ತು 4 ನೇ ಆರೋಪಿತರ ಪರ ವಕೀಲರಿಂದಃ-</u>

(2, 3 ಮತ್ತು 4 ನೇ ಆರೋಪಿ ಪರ ವಕೀಲರು 5 ನೇ ಆರೋಪಿ ಪರ ವಕೀಲರ ಪಾಟೀ ಸವಾಲನ್ನು ಅಳವಡಿಸಿಕೊಳ್ಳಲು ಕೋರಿದ್ದು ಅಳವಡಿಸಿದೆ).

<u>ಮರು ವಿಚಾರಣೆಃ ಇಲ್ಲಾ.</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು)
ಓಃಹೇಃಕೇಃಸಃಇಃಎಃಒಃ

ಸಹಿ/-
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು,
ಮತ್ತು ಸಿ.ಜೆ.ಎಂ.,ಚಿಕ್ಕಮಗಳೂರು.

ಎಸ್ಆರ್ಃ